ಬಯಸುತ್ತೇನೆ. ಕರ್ನಾಟಕ ರಾಜ್ಯದ ಮೂರನೇ ವೇತನ ಆಯೋಗವು ಮನೆಬಾಡಿಗೆ ಭತ್ಯ ಮತ್ತು ನಗರ ಪರಿಹಾರ ಭತ್ಯಗಳ ಉದ್ದೇಶಗಳಿಗಾಗಿ ನಗರಗಳು ಮತ್ತು ಇತರ ಸ್ಥಳಗಳನ್ನು ಜನಸಂಖ್ಯೆಯನ್ನು ಆಧರಿಸಿ ಐದು ವರ್ಗಗಳಾಗಿ ಪುನರ್ ವರ್ಗೀಕರಿಸಲು ಶಿಫಾರಸ್ಸು ಮಾಡಿತ್ತು. ಆಯೋಗದ ಶಿಫಾರಸ್ಸನ್ನು ಸರಕಾರವು ಅಂಗೀಕರಿಸಿ, ಮನೆ ಬಾಡಿಗೆ ಭತ್ಯ ಮತ್ತು ನಗರ ಪರಿಹಾರ ಭತ್ಯಗಳ ಉದ್ದೇಶಗಳಿಗಾಗಿ ರಾಜ್ಯದಲ್ಲಿನ ನಗರಗಳು ಮತ್ತು ಇತರ ಸ್ಥಳಗಳನ್ನು ೧೯೮೧ರ ಜನಗಣತಿಯ ಆಧಾರದ ಮೇಲೆ ಅವುಗಳ ಸಂಖ್ಯೆಯ ಅನುಸಾರವಾಗಿ ಈ ಮುಂದೆ ತೋರಿಸಿದಂತೆ ಐದು ವರ್ಗಗಳಾಗಿ ವರ್ಗೀಕರಿಸಿದೆ.

	ನಗರದ ಇತರ ಸ್ಥಳಗಳ ಜನಸಂಖ್ಯೆ	ವರ್ಗೀಕರಣ
೧	೧೫ ಲಕ್ಷ ಮತ್ತು ಅದಕ್ಕೂ ಹೆಚ್ಚು	'ಎ'
೨	೫ ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ ೧೫ ಲಕ್ಷಕ್ಕಿಂತ ಕಡಿಮೆ.	'ಬಿ'
೩	೧ ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ ಐದು ಲಕ್ಷಕ್ಕಿಂತ ಕಡಿಮೆ	'ಸಿ'
೪	೨೫,೦೦೦ ಮತ್ತು ಅದಕ್ಕೂ ಹೆಚ್ಚು, ಆದರೆ ೧ ಲಕ್ಷಕ್ಕಿಂತ ಕಡಿಮೆ	'ಡಿ'
೫	೨೫,೦೦೦ ಕ್ಕಿಂತ ಕಡಿಮೆ ಇರುವ ಇತರ ಸ್ಥಳಗಳು	'ಇ'

೧೯೮೧ರ ಜನಗಣತಿಯ ನಂತರ ಯಾವುದೇ ಅಧಿಕೃತವಾದ ಮಧ್ಯಾಂತರಿಕ ಜನಗಣತಿ ನಮ್ಮ ರಾಜ್ಯದಲ್ಲಿ ನಡೆದಿಲ್ಲ. ನಗರಸಭೆ ಮತ್ತು ನಗರಪಾಲಿಕೆಗಳು ಕೊಟ್ಟ ಪ್ರಮಾಣ ಪತ್ರಗಳನ್ನು ಆಧರಿಸಿ ಈ ವರ್ಗೀಕರಣದಲ್ಲಿ ಬದಲಾವಣೆಯನ್ನು ಮಾಡುವುದು ಸೂಕ್ತವಲ್ಲ. ೧೯೮೧ರ ಜನಗಣತಿಯ ಪ್ರಕಾರ, ಮಡಿಕೇರಿಯ ಜನಸಂಖ್ಯೆ ೨೫,೦೦೦ ಕ್ಕಿಂತ ಕಡಿಮೆ ಇರುವುದರಿಂದ ಇದು 'ಇ' ವರ್ಗದಲ್ಲಿ ಸೇರಿದೆ. ಕೇಂದ್ರ ಸರ್ಕಾರದ ಸೆನ್ಸಸ್ ಕಮಿಷನರ್‌ರವರು ಪುನಃ ಜನಗಣತಿಯನ್ನು ಮಾಡುವವರೆಗೆ ಈ ವರ್ಗೀಕರಣದಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲ.

ಬ್ರಹ್ಮಾವರ ಕ್ಷೇತ್ರದಲ್ಲಿ ರಸ್ತೆಗಳ ರಿಪೇರಿ

ಶ್ರೀ ಜಿ.ಎಸ್. ಬಸವರಾಜ್(ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನನ್ನ ಮತದಾರ ಕ್ಷೇತ್ರವಾದ ಬ್ರಹ್ಮಾವರದ ವ್ಯಾಪ್ತಿಗೊಳಪಟ್ಟ ಹೆಚ್ಚಿನ ರಸ್ತೆಗಳು ನಾದುರಸ್ತಿಯಲ್ಲಿವೆ. ಜಿಲ್ಲಾ ರಸ್ತೆಗಳಾದ ಕಲ್ಯಾಣಪುರ,—ಪೆರ್ಡೂರು–ದೊಡ್ಡದಂಗಡಿ–ಯಂಗಟಿ ರಸ್ತೆ, ಕೊಕ್ಕರ್ಣೆ–ಸಂತೆಕಟ್ಟೆ ರಸ್ತೆಗಳೂ ಕೂಡಾ ಈವರೆಗೆ ಸಂಪೂರ್ಣ ತಾರು ಆಗಿರುವುದಿಲ್ಲ. ಈ ವಿಷಯವನ್ನು ನಾನು ಕಳೆದ ಎರಡು ಬಾರಿ ಬಜೆಟ್ ಅಧಿವೇಶನಗಳಲ್ಲಿ ಸನ್ಮಾನ್ಯ ಸಚಿವರ ಗಮನಕ್ಕೆ ತಂದಾಗ ಎರಡು ಬಾರಿಯೂ ಈ ರಸ್ತೆಗಳನ್ನು ವಿಶೇಷ ಆದ್ಯತೆಯ ಮೇಲೆ ಈ ವರ್ಷವೇ ತಾರು ಹಾಕಿಸಿ ಕೊಡುವುದಾಗಿ ಭರವಸೆಯನ್ನು ನೀಡಿದರೂ, ಆ ರಸ್ತೆಗೆ ತಾರು ಹಾಕಿಸಲಾಗಲಿಲ್ಲ. ಈ ವರ್ಷದ ಬಜೆಟ್‌ನಲ್ಲೂ ಕೂಡಾ ಆ ರಸ್ತೆಗಳಿಗೆ ಹೆಚ್ಚಿನ ಹಣ ನೀಡದೇ ಇರುವುದರಿಂದ ಆ ರಸ್ತೆಗಳು ತಾರನ್ನು ಕಾಣುವ ಆಸೆ ನನಗಿಲ್ಲ. ಆದುದರಿಂದ ಈ ವರ್ಷವೇ ಆ ರಸ್ತೆಗಳ ಉಳಿದ ಭಾಗಗಳಿಗೆ ತಾರನ್ನು ಹಾಕಿಸಿ ಧೂಳವನ್ನು ತಿನ್ನುತ್ತಿರುವ ಜನರ ಮನಸ್ಸಿಗೆ ನೆಮ್ಮದಿಯನ್ನು ತರಬೇಕೆಂದು ಮಾನ್ಯ ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ವಿಮಾನಂಗಾರಿಕೆ, ಒಳನಾಡಂ ಜಲಸಾರಿಗೆ ಮಂತ್ರಿ ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ದೆಹಲಿಗೆ ಕಾರ್ಯನಿಮಿತ್ತ ಹೋಗಿರುವುದರಿಂದ, ಅವರು ಬಂದ ತಕ್ಷಣ ಇದನ್ನು ಅವರ ಗಮನಕ್ಕೆ ತರುತ್ತೇನೆ.